ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-560 056

ಸಂಖ್ಯೆ. ಎಸಿಎ-2/ವಿ.ವಿ.ಪ.ಸಾ.ಸಭೆ/2020-21

ದಿನಾಂಕ: 30/09/2020

ಗೆ.
ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-56.

ಮಾನ್ಯರೆ,

ವಿಷಯ: ದಿನಾಂಕ: 03/09/2020ರಂದು ಆನ್-ಲೈನ್ ಮೂಲಕ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 25/09/2020

*****

ದಿನಾಂಕ: 03/09/2020ರಂದು ಆನ್-ಲೈನ್ ಮೂಲಕ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.18ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ಆದೇಶಾನುಸಾರ

K. Jyothi 30/9/2020
ಕುಲಸಚಿವರು.

**ಪ್ರತಿಗಳು:**

1. ಪ್ರಧಾನ ಕಾರ್ಯದರ್ಶಿಯವರು, ರಾಜ್ಯಪಾಲರ ಕಾರ್ಯಾಲಯ, ರಾಜಭವನ, ಬೆಂಗಳೂರು – 01.
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 01.
3. ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು/ಉಪಕುಲಸಚಿವರು/ಸಹಾಯಕ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು – ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

## ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಎಸಿಎ-2/ಎ2/ವಿ.ವಿ.ಪ./ಸಾ.ಸ/2020-21

ದಿನಾಂಕ: 24-09-2020

ದಿನಾಂಕ: 03-09-2020ರಂದು ಆನ್-ಲೈನ್ ಮೂಲಕ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

<u>ಹಾಜರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ವೇಣುಗೋಪಾಲ್. ಕೆ. ಆರ್. ಕುಲಪತಿಗಳು, ಬೆಂ.ವಿ.ಬೆಂ. | ಅಧ್ಯಕ್ಷರು |
| 2. | ಡಾ. ಎಂ.ಜಿ. ಕೃಷ್ಣಮೂರ್ತಿ. ಪ್ರಾಂಶುಪಾಲರು, | ಸದಸ್ಯರು |
| 3. | ಡಾ. ಅನುರಾಧ. ಎಂ. ಪ್ರಾಂಶುಪಾಲರು, | ಸದಸ್ಯರು |
| 4. | ಡಾ. ಪುರುಷೋತ್ತಮ. ಬಿ, ಪ್ರಾಂಶುಪಾಲರು, | ಸದಸ್ಯರು |
| 5. | ಶ್ರೀ ಜಿ.ಆರ್. ಸುಧಾಕರ. ಪ್ರಾಂಶುಪಾಲರು | ಸದಸ್ಯರು |
| 6. | ಶ್ರೀ ದೇವೇಂದ್ರ ಕುಮಾರ ಪಾಠಕ್. ಪ್ರಾಂಶುಪಾಲರು | ಸದಸ್ಯರು |
| 7. | ಶ್ರೀ ಜಯರಾಮ. ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಸುಧಾಮಣಿ. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ವತ್ಸಲ. ಎನ್. ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಎಮ್. ರಾಮಚಂದ್ರ ಮೋಹನ್, ಡೀನರು, ವಿಜ್ಞಾನ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 11. | ಡಾ. ಬಿ. ಚಿಕ್ಕ ಮೇಲೂರಪ್ಪ, ಪ್ರಾಧ್ಯಾಪಕರು ಮತ್ತು ಡೀನರು, ಕಲಾ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 12. | ಡಾ. ಹಸೀನ್ ತಾಜ್, ಡೀನರು, ಶಿಕ್ಷಣ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 13. | ಡಾ. ಪಿ. ದೀಪಾ ಶೈಣೈ. ಡೀನರು, ತಾಂತ್ರಿಕ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 14. | ಡಾ. ದಶರಥ ಎನ್. ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂ.ವಿ.ಬೆಂ. | ಸದಸ್ಯರು |
| 15. | ಪ್ರೊ. ಜಯಕುಮಾರ್ ಜಿ. ರೆಡ್ಡಿ, ಪ್ರಾಧ್ಯಾಪಕರು, ವಿಶ್ಯುಯಲ್‌ಆರ್ಟ್ಸ್ ವಿಭಾಗ, ಬೆಂ.ವಿ.ಬೆಂ. | ಸದಸ್ಯರು |
| 16. | ಡಾ. ಪುಟ್ಟಸ್ವಾಮಿ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ, ಬೆಂ.ವಿ.ಬೆಂ. | ಸದಸ್ಯರು |
| 17. | ಗ್ರಂಥಪಾಲಕರು, ಬೆಂ.ವಿ.ಬೆಂ. | ಸದಸ್ಯರು |
| 18. | ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಬೆಂ.ವಿ.ಬೆಂ. | ಸದಸ್ಯರು |
| 19. | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಬೆಂ.ವಿ.ಬೆಂ. | ಸದಸ್ಯರು |
| 20. | ನಿರ್ದೇಶಕರು, ದೈಹಿಕ ಶಿಕ್ಷಣ ನಿರ್ದೇಶನಾಲಯ, ಬೆಂ.ವಿ.ಬೆಂ. | ಸದಸ್ಯರು |
| 21. | ಡಾ. ಜೆ.ಟಿ. ದೇವರಾಜು, ಕುಲಸಚಿವರು (ಮೌಲ್ಯಮಾಪನ), ಬೆಂ.ವಿ.ಬೆಂ. | ಸದಸ್ಯರು |
| 22. | ಶ್ರೀಮತಿ ಹೆಚ್. ಬಿ. ಪಾರ್ವತಿ. ವಿತ್ತಾಧಿಕಾರಿಗಳು, ಬೆಂ.ವಿ.ಬೆಂ. | ಸದಸ್ಯರು |
| 23. | ಶ್ರೀಮತಿ ಕೆ. ಜ್ಯೋತಿ. ಐ.ಎ.ಎಸ್., ಕುಲಸಚಿವರು, ಬೆಂ.ವಿ.ಬೆಂ. | ಸದಸ್ಯ ಕಾರ್ಯದರ್ಶಿ |

25/9/2020

ಕುಲಸಚಿವರು ಮಾತನಾಡಿ, ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ತಮ್ಮನ್ನು ಪರಿಚಯ ಮಾಡಿಕೊಂಡು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿ ವಿದ್ಯಾವಿಷಯಕ ಪರಿಷತ್ತಿಗೆ ಹೊಸದಾಗಿ ನಾಮ ನಿರ್ದೇಶನಗೊಂಡ ಡಾ. ಜೆ.ಟಿ. ದೇವರಾಜು, ಕುಲಸಚಿವರು (ಮೌಲ್ಯಮಾಪನ) ಬೆಂ.ವಿ.ಬೆಂ, ಡಾ. ದಶರಥ ಎನ್. ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂ.ವಿ.ಬೆಂ, ಪ್ರೊ. ಜಯಕುಮಾರ್ ಜಿ. ರೆಡ್ಡಿ, ಪ್ರಾಧ್ಯಾಪಕರು, ವಿಶ್ಯುಯಲ್ ಆರ್ಟ್ಸ್ ವಿಭಾಗ, ಬೆಂ.ವಿ.ಬೆಂ, ಡಾ. ವೈ.ಎ. ನಾರಾಯಣ ಸ್ವಾಮಿ, ವಿಧಾನ ಪರಿಷತ್ತಿನ ಶಾಸಕರು, ಡಾಲರ್ಸ್ ಕಾಲೋನಿ, ಬೆಂಗಳೂರು-94, ಶ್ರೀ ಸಿ.ಎಂ. ಲಿಂಗಪ್ಪ, ವಿಧಾನ ಪರಿಷತ್ತಿನ ಶಾಸಕರು, ಬಿಡದಿ ಹೋಬಳಿ, ರಾಮನಗರ-562 109, ಹಾಗೂ ಡಾ. ಪುಟ್ಟಸ್ವಾಮಿ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ, ಬೆಂ.ವಿ.ಬೆಂ ಇವರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರಿದರು ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸುತ್ತಿರುವ ಪ್ರೊ. ಬಿ.ಕೆ ರವಿ, ಹಿಂದಿನ ಕುಲಸಚಿವರು, ಬೆಂ.ವಿ.ಬೆಂ, ಡಾ. ಸಿ. ಶಿವರಾಜು, ಹಿಂದಿನ ಕುಲಸಚಿವರು (ಮೌ), ಬೆಂ.ವಿ.ಬೆಂ, ಡಾ. ಪ್ರದೀಪ್ ಜಿ. ಸಿದ್ದೇಶ್ವರ್, ಪಿ.ಎಂ.ಇ.ಬಿ, ಬೆಂ.ವಿ.ಬೆಂ, ಡಾ. ಎಲ್. ಗೋಮತಿ ದೇವಿ, ರಸಾಯನ ಶಾಸ್ತ್ರ ವಿಭಾಗ, ಬೆಂ.ವಿ.ಬೆಂ, ಡಾ. ಸುದೇಶ್ ವಿ. ಪ್ರಾಂಶುಪಾಲರು, ವಿಶ್ವವಿದ್ಯಾಲಯ ಕಾನೂನು ಕಾಲೇಜು, ಬೆಂ.ವಿ.ಬೆಂ, ಶ್ರೀ. ಹೆಚ್. ಎಂ. ರೇವಣ್ಣ, ವಿಧಾನ ಪರಿಷತ್ತಿನ ಶಾಸಕರು, ಶ್ರೀ. ಟಿ.ಎ. ಶರವಣ, ವಿಧಾನ ಪರಿಷತ್ತಿನ ಶಾಸಕರು, ಶ್ರೀ. ಟಿ.ಎಂ. ಶಿವಶಂಕರ್, ಶ್ರೀ. ಮಧುಚಂದ್ರ. ಜಿ, ಹಾಗೂ ಡಾ. ಮೊಹಮ್ಮದ್ ಅಫ್ಜಲ್ ಫಾಷಾ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ, ಬೆಂ.ವಿ.ಬೆಂ, ಅವರುಗಳ ಸೇವೆಯನ್ನು ಸ್ಮರಿಸಿದರು. ಹಾಗೂ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿ ಕೊಡಬೇಕೆಂದು ಕುಲಪತಿಗಳನ್ನು ಕೋರಿದರು.

ಕುಲಪತಿಗಳು ಮಾತನಾಡಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸಭೆಗೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

**ವಿಷಯ ಸಂಖ್ಯೆ: 1: ದಿನಾಂಕ: 19-05-2020ರಂದು ಸುತ್ತೋಲೆ ಮೂಲಕ (By Circulation) ತೆಗೆದುಕೊಳ್ಳಲಾದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ವಿಷಯಗಳ ಬಗೆಗಿನ ನಿರ್ಣಯಗಳನ್ನು/ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ**

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ: 19-05-2020ರಂದು ಸುತ್ತೋಲೆ ಮೂಲಕ (By Circulation) ತೆಗೆದುಕೊಳ್ಳಲಾದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ವಿಷಯಗಳ ಬಗೆಗಿನ ನಿರ್ಣಯಗಳನ್ನು/ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ತು ಸ್ಥಿರೀಕರಿಸಿತು.

**ವಿಷಯ ಸಂಖ್ಯೆ:2: ಬೆಂಗಳೂರು ವಿಶ್ವವಿದ್ಯಾಲಯದ 55ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.**

15/7/2020

ನಿರ್ಣಯ:

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 55ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ವಿಶ್ವವಿದ್ಯಾಲಯದ ಪರಿನಿಯಮಾವಳಿ 15.1ರಂತೆ ವಿದ್ಯಾವಿಷಯಕ ಪರಿಷತ್ತು ಪರಿಗಣಿಸಿ ಅನುಮೋದಿಸಿತು. ಮುಂದುವರೆದು, ಸದರಿ ಪಟ್ಟಿಗಳಿಗೆ ತಿದ್ದುಪಡಿಗಳೇನಾದರೂ (Errata) ಇದ್ದರೆ, ಅವುಗಳನ್ನು ಸೇರಿಸಿಕೊಳ್ಳಲು ಕುಲಪತಿಯವರಿಗೆ ಅಧೀಕರಿಸಿತು.

**Item No.: 3: Approval of the proceedings of the Faculty of Science (UG & PG) at its meeting held on 09-03-2020.**

The Vice-Chancellor requested the Dean, Faculty of Science to present the subject. Prof. M. Ramachandra Mohan briefed that the Faculty of Science at its meeting held on 09-03-2020 has considered the proceedings of the Board of Studies of various departments of the Universities and approved the recommendations of the Board of Studies in the respect of revision of syllabus, regulations, scheme of examinations etc. He requested that the recommendations of the Faculty of science may be accepted.

**Resolution:**

After detailed discussions, the Academic Council resolved to approve the proceedings of the Faculty of Science (UG & PG) held on 09-03-2020.

**ವಿಷಯ ಸಂಖ್ಯೆ: 4: 2014–15ಕ್ಕೂ ಹಿಂದಿನ ಸಾಲುಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯಲ್ಲಿ ನೊಂದಣಿಗೊಂಡು (B.A., B.Sc., B.Com, B.B.M., B.V.A., B.C.A, B.B.A., M.A., M.Sc., M.Com., M.C.A., M.B.A., L.L.B., B.E., B.Arch., M.E., M.Arch) ವ್ಯಾಸಂಗಮಾಡಿ ಕೆಲವೊಂದು ವಿಷಯಗಳಲ್ಲಿ ಅನುತ್ತೀರ್ಣಗೊಂಡಿದ್ದು, ಅಂತಹ ವಿಷಯಗಳಲ್ಲಿ ಪರೀಕ್ಷೆ ಬರೆಯಲು ಮತ್ತೊಂದು ಅವಕಾಶವನ್ನು ನೀಡುವ ಕುರಿತು.**

ಪ್ರೊ. ಬಿ. ಚಿಕ್ಕ ಮೇಲೂರಪ್ಪರವರು ಮಾತನಾಡಿ, ವಿವಿಧ ಪದವಿಗಳಲ್ಲಿ ಅನುತ್ತೀರ್ಣಗೊಂಡಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಒಂದು ಅವಕಾಶವೆಂಬಂತೆ ಪರೀಕ್ಷೆ ಬರೆಯಲು ಅನುಮತಿ ನೀಡಬೇಕೆಂದು ಕೋರಿದರು. ಡಾ॥ ಎನ್. ದಶರಥರವರು ಮಾತನಾಡಿ, ಅನುತ್ತೀರ್ಣಗೊಂಡಿರುವ ಎಲ್.ಎಲ್.ಎಂ. ವಿದ್ಯಾರ್ಥಿಗಳಿಗೂ ಸಹ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕೆಂದು ಕೋರಿದರು.

25/9/2020

ನಿರ್ಣಯ:

ಚರ್ಚೆಯ ನಂತರ, 2004–05ರ ಶೈಕ್ಷಣಿಕ ಸಾಲು ಹಾಗೂ ನಂತರದಲ್ಲಿ. ಸೆಮಿಸ್ಟರ್ ಪದ್ಧತಿಯಲ್ಲಿ ಅಧ್ಯಯನ ಮಾಡಿ ಅನುತ್ತೀರ್ಣಗೊಂಡಿರುವ ವಿವಿಧ ಎಲ್ಲಾ ಪದವಿ/ಸ್ನಾತಕೋತ್ತರ ಪದವಿಗಳ ವಿದ್ಯಾರ್ಥಿಗಳಿಗೆ (ಆರೋಗ್ಯ ವಿಜ್ಞಾನ ವಿಷಯಗಳನ್ನು ಹೊರತುಪಡಿಸಿ ಹಾಗೂ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಯು.ವಿ.ಸಿ.ಇ. ವಿದ್ಯಾರ್ಥಿಗಳಿಗೆ ಮಾತ್ರ) ಮತ್ತು ಶೈಕ್ಷಣಿಕ ವರ್ಷ 2000–01 ಹಾಗೂ ನಂತರದ ವರ್ಷದಲ್ಲಿ ವಾರ್ಷಿಕ ಪದ್ಧತಿಯಲ್ಲಿ (Annual Scheme) ಅಧ್ಯಯನ ಮಾಡಿ ಅನುತ್ತೀರ್ಣಗೊಂಡಿರುವ ವಿವಿಧ ಎಲ್ಲಾ ಸ್ನಾತಕ/ಸ್ನಾತಕೋತ್ತರ ಪದವಿಗಳ ವಿದ್ಯಾರ್ಥಿಗಳಿಗೆ (ಆರೋಗ್ಯ ವಿಜ್ಞಾನ ವಿಷಯಗಳನ್ನು ಹೊರತುಪಡಿಸಿ ಹಾಗೂ ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಯು.ವಿ.ಸಿ.ಇ. ವಿದ್ಯಾರ್ಥಿಗಳಿಗೆ ಮಾತ್ರ) ಒಂದು ಬಾರಿಯ ಅವಕಾಶವೆಂಬಂತೆ (One time measure) ಅವರು ಅನುತ್ತೀರ್ಣಗೊಂಡಿರುವ ವಿಷಯಗಳಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ವಿದ್ಯಾವಿಷಯಕ ಪರಿಷತ್ತು ಅನುಮೋದನೆ ನೀಡಿತು.

ಮುಂದುವರೆದು, ಸೆಮಿಸ್ಟರ್ ಪದ್ಧತಿಯ ವಿದ್ಯಾರ್ಥಿಗಳು ಜನವರಿ 2021ರಲ್ಲಿ ನಡೆಯುವ ಬೆಸ ಸಂಖ್ಯೆಯ ಸೆಮಿಸ್ಟರ್ (Odd semester) ಪರೀಕ್ಷೆಗಳು ಹಾಗೂ ಜೂನ್/ಜುಲೈ 2021ರಲ್ಲಿ ನಡೆಯುವ ಸಮ ಸಂಖ್ಯೆಯ ಸೆಮಿಸ್ಟರ್ (Even semester) ವಿದ್ಯಾರ್ಥಿಗಳು ಹಾಗೂ ವಾರ್ಷಿಕ ಪದ್ಧತಿ (Annual Scheme) ವಿದ್ಯಾರ್ಥಿಗಳು ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅನುಮತಿಸಲು ನಿರ್ಣಯಿಸಿತು.

ವಿದ್ಯಾರ್ಥಿಗಳು ಆ ಸಂದರ್ಭದಲ್ಲಿ ಅಧ್ಯಯನ ಮಾಡಿದ ವಿಷಯಗಳು/ಪಠ್ಯಕ್ರಮಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಸಂಬಂಧಿಸಿದ ನಿಕಾಯದ ಡೀನರು ನೀಡುವ ಅಭಿಪ್ರಾಯದಂತೆ, ಸಮಾನ ವಿಷಯಗಳಲ್ಲಿ (Equivalent subjects) ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕೆಂದೂ ಸಹ ನಿರ್ಣಯಿಸಿತು.

**Item No.: 5 : Discontinuation of MBA course at Indian Institute of Plantation Management, Bengaluru and issue of No Objection Certificate – reg.**

**Resolution:**

After detailed discussions, the Academic Council resolved to permit voluntary closure of MBA course at Indian Institute of Plantation Management, Bengaluru u/s 65 (2) of the K.S.U. Act, 2000.

**ವಿಷಯ ಸಂಖ್ಯೆ: 6 : 2020–21ನೇ ಸಾಲಿನಿಂದ ಕೆಲವು ಕಾಲೇಜುಗಳ ಸ್ವಯಂ ಮುಚ್ಚುವ ಮನವಿಯನ್ನು ಪರಿಗಣಿಸಿ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.**

ನಿರ್ಣಯ:

ಚರ್ಚೆಯ ನಂತರ, 2020–21ನೇ ಸಾಲಿನಿಂದ ಕೆಳಕಂಡ ಕಾಲೇಜುಗಳ ಸ್ವಯಂ ಮುಚ್ಚುವ ಮನವಿಯನ್ನು ಕೆ.ಎಸ್.ಯು. ಅಧಿನಿಯಮ 2000ದ 65ನೇ ಪ್ರಕರಣದ (2)ನೇ ಉಪ ಪ್ರಕರಣದಡಿಯಲ್ಲಿ ವಿದ್ಯಾವಿಷಯಕ ಪರಿಷತ್ತು ಪರಿಗಣಿಸಿ ಅನುಮೋದಿಸಿತು.

| ಕ್ರಮ ಸಂಖ್ಯೆ | ಕಾಲೇಜು | ಅಸ್ತಿತ್ವದಲ್ಲಿರುವ ಕೋರ್ಸುಗಳು |
|---|---|---|
| 1. | ಚಿತ್ರಕೂಟ ಇನ್ಸಿಟಿಟ್ಯೂಟ್ ಆಫ್ ಇನ್ಫಾರ್ಮೇಷನ್ ಸೈನ್ಸಸ್,<br>ಚಿತ್ರಕೂಟ ಫಾರಂ, ತಿಪ್ಪಗೊಂಡನಹಳ್ಳಿ, ಮಾಗಡಿರಸ್ತೆ,<br>ಬೆಂಗಳೂರು–562 120. (ಪತ್ರ ದಿನಾಂಕ: 20–11–2019) | ಬಿ.ಕಾಂ., ಬಿಸಿಎ |
| 2. | ಆಕ್ಸ್‌ಫರ್ಡ್ ಪದವಿ ಸಂಜೆ ಕಾಲೇಜು,<br>ಟೀಚರ್ಸ್ ಕಾಲೋನಿ, ನಾಗರ ಭಾವಿ ಮುಖ್ಯರಸ್ತೆ,<br>ಬೆಂಗಳೂರು–560 072 (ಪತ್ರ ದಿನಾಂಕ: 03–10–2019) | ಬಿ.ಕಾಂ. |
| 3. | ಡಾನ್ ಬಾಸ್ಕೊ ಕಾಲೇಜ್ ಆಫ್ ಸೈನ್ಸ್ ಅಂಡ್<br>ಮ್ಯಾನೇಜ್‌ಮೆಂಟ್, ನಂ.1. ಎ/10, ಬೊಮ್ಮನಹಳ್ಳಿ,<br>ಹೊಸೂರು ರಸ್ತೆ, ಬೆಂಗಳೂರು–560 068<br>(ಪತ್ರ ದಿನಾಂಕ: 05–03–2020) | ಬಿ.ಬಿ.ಎ., ಬಿ.ಕಾಂ., ಎಂ.ಕಾಂ.<br>ಮತ್ತು<br>ಪಿ.ಜಿ. ಡಿಪ್ಲೋಮಾ |

**Item No.: 7:** To consider Institution of Endowment in the name of Sri (Late) M. Guruprasad for awarding Cash Prize to a student securing highest marks in M.Com. P.G. degree course.

**Resolution:**

After detailed discussions, the Academic Council resolved to consider the Institution of Endowment in the name of Sri (Late) M. Guruprasad for awarding Cash Prize to a student securing highest marks in M.Com. P.G. degree course.

**Item No.: 8:** To consider approval of the proceedings of the Faculty of Commerce at its meeting held on (by Circulation) 31-08-2020.

Dr. R. Sarvamangala, Professor, Dept. of Commerce, an invitee, explained in brief about the proceedings of BOS in Commerce held on 26-06-2020 in the matter of introduction/restructure of B.Com. (Regular), B.Com (Finance & Accounting), B.Com (Honours), B.Com. (Business Analytics), B.Com. (Tourism), BBA (Regular) and BBA (Aviation) and the same has been approved by the Faculty of the Commerce by Circulation on 31-08-2020 and requested the august body to approve the same.

28/9/2020

Resolution:

After detailed discussions, the Academic Council resolved to approve the proceedings of the Faculty of Commerce at its meeting held on (by Circulation) dated: 31-08-2020 and further resolved that the suggestion, if any, from the members of the Academic Council be incorporated in the syllabus.

ವಿಷಯ ಸಂಖ್ಯೆ :9: ಬೆಂಗಳೂರಿನ ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸಸ್ ಕಾಲೇಜಿಗೆ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡಲು ರಚಿಸಲ್ಪಟ್ಟ ಸಮಿತಿಯ ವರದಿಯನ್ನು ಪರಿಗಣಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸಸ್, ಕೊಮ್ಮಘಟ್ಟ, ಸೂಲಿಕೆರೆ ಅಂಚೆ, ಕೆಂಗೇರಿ ಹೋಬಳಿ, ಬೆಂಗಳೂರು–560 060 ಇವರಿಗೆ, ಜೀವ ತಂತ್ರಜ್ಞಾನ ಮತ್ತು ಜೀವ ರಸಾಯನಶಾಸ್ತ್ರ ವಿಷಯಗಳಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ನೀಡುವ ಬಗ್ಗೆ ಕುಲಪತಿಗಳ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಸಮಿತಿಯು ದಿನಾಂಕ: 02–03–2020ರ ವರದಿಯನ್ನು ವಿದ್ಯಾವಿಷಯಕ ಪರಿಷತ್ತು ಪರಿಗಣಿಸಿ ಅನುಮೋದಿಸಿತು.

ಮುಂದುವರೆದು, ಕುಲಪತಿಗಳು ಮಾತನಾಡಿ ಪದ್ಮಶ್ರೀ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸಸ್ ಕಾಲೇಜಿಗೆ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದಿಂದ 'ದೀನ ದಯಾಳ್ ಉಪಾದ್ಯಾಯ ಕೌಶಲ ಕೇಂದ್ರ' ಯೋಜನೆಯಡಿಯಲ್ಲಿ (DDU Kaushal Kendra) ಬಿ.ವೋಕ್. ಮತ್ತು ಎಂ.ವೋಕ್. ಕೋರ್ಸುಗಳನ್ನು ನಡೆಸಲು ಅನುಮತಿ ಸಿಕ್ಕಿದ್ದು, ಯು.ಜಿ.ಸಿ.ಯ National Skill Qualifications Framework (NSQF) ಯೋಜನೆಯಡಿಯಲ್ಲಿ ಬಿ.ವೋಕ್ ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಮೊದಲ ವರ್ಷದ ಬಿ.ವೋಕ್ ಪೂರೈಸಿದ ನಂತರ ಡಿಪ್ಲೊಮಾ, ಎರಡು ವರ್ಷ ಪೂರೈಸಿದ ನಂತರ, ಅಡ್ವಾನ್ಸ್‌ಡ್ ಡಿಪ್ಲೊಮಾ, ಮೂರು ವರ್ಷ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಬಿ.ವೋಕ್ ಪದವಿ ನೀಡಲು ಯು.ಜಿ.ಸಿ. ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಸದರಿ ಮಾರ್ಗಸೂಚಿಯನುಸಾರ, ಡಿಪ್ಲೊಮಾ ಮತ್ತು ಅಡ್ವಾನ್ಸ್‌ಡ್ ಡಿಪ್ಲೊಮಾ ಪ್ರಮಾಣ ಪತ್ರವನ್ನು ನೀಡಲು ಸದರಿ ಕಾಲೇಜಿನ ಪ್ರಾಂಶುಪಾಲರು ಮನವಿ ಮಾಡಿಕೊಂಡಿದ್ದಾರೆ. ಇದನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.

ದೀರ್ಘ ಚರ್ಚೆಯ ನಂತರ, ಯು.ಜಿ.ಸಿ.ಯ National Skill Qualifications Framework (NSQ) ಈ ಯೋಜನೆಯಡಿಯಲ್ಲಿ ಬಿ.ವೋಕ್ ಕ್ಕೋರ್ಸುಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಮೊದಲ ವರ್ಷದ ಬಿ.ವೋಕ್ ಪೂರೈಸಿದ ನಂತರ ಡಿಪ್ಲೊಮಾ, ಎರಡು ವರ್ಷ ಪೂರೈಸಿದ ನಂತರ, ಅಡ್ವಾನ್ಸ್‌ಡ್ ಡಿಪ್ಲೊಮಾ, ಮೂರು ವರ್ಷ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಬಿ.ವೋಕ್ ಪದವಿ ನೀಡಲು ವಿದ್ಯಾವಿಷಯಕ ಪರಿಷತ್ತು ನಿರ್ಣಯಿಸಿತು.

**Item No: 10 :** To consider the draft 'Statutes relating to the manner of conducting interview for appointment and promotion of teachers and other academic staff in the Bangalore University, Bengaluru, 2019'-reg.

**Resolution:**

After detailed discussions, the Academic Council resolved to approve the Draft 'Statutes relating to the manner of conducting interview for appointment and promotion of teachers and other academic staff in the Bangalore University, Bengaluru, 2019' along with the proceedings of the Statute Committee u/s 40 (1&2) of the K.S.U. Act, 2000.

**GENERAL DISCUSSION:-**

1. ಡಾ॥ ಜಯರಾಮು ಅವರು ಮಾತನಾಡಿ, ವಿದ್ಯಾವಿಷಯಕ ಪರಿಷತ್ತಿನ ಸಭೆಯನ್ನು ಭೌತಿಕವಾಗಿ ಕರೆಯಲು ವಿನಂತಿಸಿದರು. ಕುಲಪತಿಗಳು ಉತ್ತರಿಸಿ, ಆನ್-ಲೈನ್ ಮೂಲಕ ನಡೆದ ಈ ಸಭೆಯು ಬಹಳ ಶಿಸ್ತುಬದ್ಧವಾಗಿ ನಡೆದಿದೆ. ಕೋವಿಡ್-19 ಪ್ರಕರಣಗಳು ಕಡಿಮೆಯಾಗುವ ತನಕ ಆನ್-ಲೈನ್ ಮೂಲಕ ಸಭೆಯನ್ನು ನಡೆಸಲಾಗುವುದೆಂದು ತಿಳಿಸಿದರು.
2. ಡಾ॥ ಬಿ. ಚಿಕ್ಕ ಮೇಲೂರಪ್ಪರವರು ಮಾತನಾಡಿ, ದೂರಶಿಕ್ಷಣ ನಿರ್ದೇಶನಾಲಯದಲ್ಲಿ 2020-21ನೇ ಸಾಲಿನ ವಿವಿಧ ಪದವಿ/ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದು ತಿಳಿಸಿದರು. ಕುಲಪತಿಗಳು ಉತ್ತರಿಸಿ, ಸರ್ಕಾರದ ನಿರ್ದೇಶನದನುಸಾರ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ವಂದಾನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

25/9/2020

ಕುಲಪತಿಯವರು